# ಪ್ರತಿಭಾವಂತ ಸಂಸದೀಯ ಪಟು ಎಸ್.ಶಿವಪ್ಪನವರು



ಸಮಾಜವಾದವನ್ನೇ ಉಸಿರಾಗಿಸಿಕೊಂಡು ಸೈದ್ಧಾಂತಿಕ ರಾಜಕೀಯ ಹೋರಾಟ ಮಾಡಿದ ಕರ್ನಾಟಕದ ಪ್ರತಿಭಾವಂತ ಸಂಸದೀಯ ಪಟು ಧೀಮಂತ ರಾಜಕಾರಣಿ ಎಸ್.ಶಿವಪ್ಪನವರು ಹಾಸನ ಜಿಲ್ಲೆ, ಚನ್ನರಾಯಪಟ್ಟಣ ತಾಲ್ಲೂಕಿನ ಕಾಂತರಾಜಪುರದಲ್ಲಿ ದಿ:22.10.1914 ರಲ್ಲಿ ಜನಿಸಿದರು. ತಂದೆ ಎಸ್.ನಂಜಪ್ಪನವರು, ತಾಯಿ ಕೆಂಪಮ್ಮ.

ಇವರು ಪ್ರಾಥಮಿಕ ಶಿಕ್ಷಣವನ್ನು ಸ್ವಗ್ರಾಮ ಕಾಂತರಾಜಪುರದಲ್ಲಿ ಪಡೆದರೆ, ಪ್ರೌಢಶಿಕ್ಷಣವನ್ನು ಪೋರ್ಟ್ ಹೈಸ್ಕೂಲ್ ಬೆಂಗಳೂರಿನಲ್ಲೂ, ಬಿ.ಎಸ್ಸಿ. ಪದವಿಯನ್ನು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಪಡೆದರು.

ದೇಶಾದ್ಯಂತ ಸಮಾಜವಾದ ಚಳುವಳಿಯ ಕಾವು ಏರತೊಡಗಿದ ಸಂದರ್ಭದಲ್ಲಿ ವಿದ್ಯಾಭ್ಯಾಸ ಮುಗಿಸಿದ ಎಸ್.ಶಿವಪ್ಪನವರು ಕಾಂಗ್ರೇಸ್ ಪಕ್ಷಕ್ಕೆ ನಿಷ್ಠವಾಗಿದ್ದ ತಮ್ಮ ಕುಟುಂಬದ ವಿರೋಧದ ನಡುವೆ 1943 ರಲ್ಲಿ ಸ್ವತಂತ್ರ ಪಕ್ಷದ ಕಾರ್ಯಕರ್ತನಾಗಿ ರಾಜಕೀಯಕ್ಕೆ ಪಾದಾರ್ಪಣೆ ಮಾಡಿದರು. 1945 ರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿದು ಜಯಗಳಿಸಿ, ಆಗಿನ ಮೈಸೂರು ಸರ್ಕಾರದ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ, ತಮ್ಮ ವ್ಯಕ್ತಿತ್ವ ಮತ್ತು ವಾಕ್ ಚಾತುರ್ಯದ ಮೂಲಕ ಸಭೆಯ ಗಮನ ಸೆಳೆದಿದ್ದರು.

1952 ರಲ್ಲಿ ನಡೆದ ಮೊದಲ ವಿಧಾನ ಸಭೆಗೆ ಶ್ರವಣಬೆಳಗೊಳ ಕ್ಷೇತ್ರದಿಂದ ಸೋಶಿಯಲಿಸ್ಟ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿ, ಜಯಗಳಿಸಿ ವಿಧಾನ ಸಭಾ ಸದಸ್ಯರಾಗಿ, ಶೈಕ್ಷಣಿಕ ಕ್ಷೇತ್ರಗಳ ಸಮಸ್ಯೆಗಳು, ರೈತರ ಹಿತಕಾಯುವ ಮತ್ತು ಜನಸಾಮಾನ್ಯರ ಸಮಸ್ಯೆಗಳ ಬಗ್ಗೆ ತಮ್ಮ ದಿಟ್ಟ ನಿಲುವು ಮತ್ತು ನಿರ್ಧಾರಗಳಿಂದ ಸದನದ ಗಮನ ಸೆಳೆಯುತ್ತಿದ್ದರು. 1962 ರಲ್ಲಿ ಮೂರನೇ ವಿಧಾನ ಸಭೆಗೆ ಮತ್ತು 1967 ರಲ್ಲಿ ನಾಲ್ಕನೇ ವಿಧಾನ ಸಭೆಗೆ ಶ್ರವಣಬೆಳಗೊಳ ಕ್ಷೇತ್ರದಿಂದ ಪ್ರಜಾಸೋಶಿಯಲಿಸ್ಟ್ ಪಾರ್ಟಿಯಿಂದ ಚುನಾಯಿತರಾದ ಶಿವಪ್ಪನವರು ಒಂಬತ್ತು ವರ್ಷಗಳ ಕಾಲ, ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾಗಿ ಆ ಸ್ಥಾನಕ್ಕೆ ಘನತೆ ಮತ್ತು ಗೌರವವನ್ನು ತಂದು ಕೊಟ್ಟರು. ನಾಡಿನ ಜ್ವಲಂತ ಸಮಸ್ಯೆಗಳಾಗಿದ್ದ ಶಿಕ್ಷಣ, ಆರೋಗ್ಯ, ಕೃಷಿ ಮತ್ತು ನೀರಾವರಿ ಸಮಸ್ಯೆಗಳ ಬಗ್ಗೆ ಸದನದ ಗಮನ ಸೆಳೆದಿದ್ದರು. 1969 ರಿಂದ 1971 ರ ಅವಧಿಯಲ್ಲಿ ಸಾರ್ವಜನಿಕ ಲೆಕ್ಕ ಪತ್ರ ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು. 1968 ರಲ್ಲಿ ಬಹಮಾಸ್ ನಲ್ಲಿ ನಡೆದ ಕಾಮನ್ ವೆಲ್ತ್ ಸಂಸತ್ ಸಮಾವೇಶದಲ್ಲಿ ಭಾರತ ಸರ್ಕಾರವನ್ನು ಪ್ರತಿನಿಧಿಸಿದ್ದರು.

1974 ರಲ್ಲಿ ವಿಧಾನಪರಿಷತ್ತಿನ ಸದಸ್ಯರಾಗಿ ಆಯ್ಕೆಯಾದ ಶಿವಪ್ಪನವರು 1980 ರವರೆಗೆ 2 ಅವಧಿಗೆ ವಿಧಾನ ಪರಿಷತ್‌ನ ಅಧ್ಯಕ್ಷರಾಗಿ, ಸದನದ ಕಲಾಪವನ್ನು ದಕ್ಷತೆ ಮತ್ತು ಘನತೆಯಿಂದ ನಡೆಸಿಕೊಂಡು ಬಂದು ವಿಧಾನಪರಿಷತ್ ಅಧ್ಯಕ್ಷ ಸ್ಥಾನದ ಪರಂಪರೆಗೆ ಮಹತ್ವವನ್ನು ತಂದುಕೊಟ್ಟರು.

1953-1958 ರವರೆಗೆ ಕರ್ನಾಟಕ ರಾಜ್ಯದ ಸೋಶಿಯಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿ ನಾಡಿನ ವಿವಿಧ ಭಾಗಗಳಲ್ಲಿ ಸಂಚರಿಸಿ, ಪಕ್ಷದ ಬಲಸಂವರ್ಧನೆಗೆ ಶ್ರಮಿಸಿದರು. 1959-1971 ರವರೆಗೂ ಪ್ರಜಾಸೋಶಿಯಲಿಸ್ಟ್ ಪಾರ್ಟಿಯ ಅಧ್ಯಕ್ಷರಾಗಿ ಕರ್ನಾಟಕದಲ್ಲಿ 16 ಮಂದಿ ಕೆ.ಎಂ.ಪಿ. ಪಕ್ಷದ ಸದಸ್ಯರನ್ನು ಪಿ.ಎಸ್.ಪಿ.ಗೆ ವಿಲೀನಗೊಳಿಸಿ ಪಿ.ಎಸ್.ಪಿ.ಯ ಬಲವನ್ನು ಇಮ್ಮಡಿಗೊಳಿಸಿದರು.

ಬದಲಾದ ಪರಿಸ್ಥಿತಿಗನುಗುಣವಾಗಿ ತನ್ನ ಸಿದ್ಧಾಂತವನ್ನು ಬಿಟ್ಟುಕೊಡದೆ, ಕಾಂಗ್ರೇಸ್ ಪಕ್ಷವನ್ನು ಸೇರಿ 1971 ರಿಂದ 1980 ರವರೆಗೆ ಎ.ಐ.ಸಿ.ಸಿ.ಯ ಸದಸ್ಯರಾಗಿ, ರಾಜ್ಯದ ಕೆ.ಪಿ.ಸಿ.ಸಿ.ಯ ಕಾರ್ಯಕಾರಿ ಸದಸ್ಯರಾಗಿ ಅನೇಕ ಸಮಿತಿಗಳ ಸದಸ್ಯರಾಗಿ ಕಾಂಗ್ರೇಸ್ ಪಕ್ಷಕ್ಕಾಗಿ ದುಡಿದರು.

ಸಮಾಜವಾದಿ ನಿಲುವು ಹೊಂದಿದ್ದ ಜನತಾದಳಕ್ಕೆ 1989 ರಲ್ಲಿ ವಾಪಾಸ್ಸಾದ ಶಿವಪ್ಪನವರು ರಾಜ್ಯ ಜನತಾದಳದ ಉಪಾಧ್ಯಕ್ಷರಾಗಿ 1990 ರವರೆಗೂ ಪಕ್ಷವನ್ನು ಬಲಪಡಿಸಿದರು.

1959 ರಲ್ಲಿ ಮೈಸೂರಿನ ಗ್ರಾಜುಯೇಟ್ಸ್ ಕ್ಷೇತ್ರದಿಂದ ಆಯ್ಕೆಗೊಂಡು ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ, ವಿಶ್ವವಿದ್ಯಾನಿಲಯದ ಅನೇಕ ಪ್ರಗತಿಪರ ಕಾರ್ಯಗಳನ್ನು ಕೈಗೊಂಡರು. ವಿಶ್ವವಿದ್ಯಾನಿಲಯಕ್ಕೆ 200 ಎಕರೆ ಜಮೀನಿನ ಖರೀದಿ, ವಿಶ್ವವಿದ್ಯಾನಿಲಯದ ಅತಿಥಿಗೃಹ ನಿರ್ಮಾಣ, ಪದವಿ ವಿದ್ಯಾರ್ಥಿಗಳು ಇಂಗ್ಲಿಷ್ ನಲ್ಲಿ ಗಳಿಸಬೇಕಿದ್ದ 40 ಅಂಕಗಳಿಗೆ ಬದಲಾಗಿ 20 ಅಂಕಗಳಿಗೆ ಇಳಿಕೆ ಮುಂತಾದ ಕಾರ್ಯಗಳು ಇವರ ಅವಧಿಯಲ್ಲಿ ಅನಿಷ್ಠಾನಕ್ಕೆ ಬಂದವು.

ಶ್ರೀಯುತರು ವಿರೋಧ ಪಕ್ಷದ ನಾಯಕರಾಗಿದ್ದ ಅವಧಿಯಲ್ಲಿ ಹೇಮಾವತಿ ನದಿಗೆ ಗೊರೂರು ಅಣೆಕಟ್ಟು ನಿರ್ಮಾಣ ಕಾಮಗಾರಿ ಪ್ರಾರಂಭ, ಶ್ರವಣಬೆಳಗೊಳ ಸೇರಿದಂತೆ ಹಾಸನ ಜಿಲ್ಲೆಗೆ ಮೂಲಭೂತ ಸೌಕರ್ಯಗಳಾದ ರಸ್ತೆಗಳು, ಶಾಲೆಗಳು, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕೊರತೆಯಾಗದಂತೆ ನೋಡಿಕೊಂಡರು. ಹೇಮಾವತಿ ಸಹಕಾರ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ನೆರವು, ಶ್ರವಣಬೆಳಗೊಳದ ಗೊಮ್ಮಟನ ಮಹಾಮಸ್ತಕಾಭಿಷೇಕವನ್ನು ಇವರ ಅವಧಿಯಲ್ಲಿ ಎರಡು ಭಾರಿ ವಿಜೃಂಭಣೆಯಿಂದ ಆಚರಿಸಿದ್ದು ಶ್ರೀ ಕ್ಷೇತ್ರಕ್ಕೆ ಸಂಪರ್ಕ ಕಲ್ಪಿಸುವ ಎಲ್ಲ ರಸ್ತೆಗಳ ಸಮರ್ಪಕ ಅಭಿವೃದ್ಧಿ, ಕಾಂತರಾಜಪುರಕ್ಕೆ ಸೂಕ್ತ ರಸ್ತೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದ ಸ್ಥಾಪನೆ ಇವು ಇವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿವೆ.

ದಕ್ಷ ಆಡಳಿತಗಾರ, ನಿಷ್ಠುರವಾದಿ, ಮಾಗಿದ ಅನುಭವಿ, ರಾಜಕೀಯ ಚತುರ, ಉತ್ತಮ ವಾಗ್ಮಿ, ಕರ್ನಾಟಕ ಕಂಡ ಅಪರೂಪದ ಧೀಮಂತ ರಾಜಕಾರಣಿ ದಿ: 27-3-1995 ರಂದು ತೀವ್ರ ಅನಾರೋಗ್ಯದಿಂದ ಇಹಲೋಕ ತ್ಯಜಿಸಿದರು.